ಫೈನಾನ್ಸ್ ಕಾರ್ಪೊರೇಷನ್‌ನವರು, ಮೂರವಾಡಿಗಳು ಕಮಿಷನ್ ತೆಗೆದುಕೊಳ್ಳುವ ರೀತಿಯಲ್ಲಿ ಅವರು ಮಾಡಬಾರದು. ಈ ಬಗ್ಗೆ ಕೇಂದ್ರ ಸರಕಾರದ ಜೊತೆಗೆ ಪತ್ರ ವ್ಯವಹಾರ ಮಾಡಲಾಗಿದೆಯೇ ? ಎನ್.ಡಿ.ಸಿ. ಮೀಟಿಂಗ್‌ನಲ್ಲಾಗಲೀ, ಮುಖ್ಯಮಂತ್ರಿಗಳ ಸಭೆಯಲ್ಲಾಗಲೀ, ಈ ದೇಶದ ಎಲ್ಲಾ ರಾಜ್ಯಗಳ ಆರ್ಥಿಕ ಪರಿಸ್ಥಿತಿಯ ದೃಷ್ಟಿಕೋನ ಇಟ್ಟುಕೊಂಡು ಇದನ್ನು ಸುಧಾರಿಸಲಿಕ್ಕೆ ಸಹಕಾರಿಯಾಗುವಂತಹ ರೀತಿಯಲ್ಲಿ ಪರಿಣಾಮಕಾರಿಯಾದ ರೀತಿಯಲ್ಲಿ ಚರ್ಚಿಸಿ, ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಗಳು ಕೇಂದ್ರ ಸರಕಾರಕ್ಕೆ ಯಾವ ಬಡ್ಡಿದರದಲ್ಲಿ ಸಾಲ ಕೊಡುತ್ತಾರೆ ಅದೇ ಬಡ್ಡಿದರವನ್ನು ರಾಜ್ಯಸರಕಾರಗಳಿಗೂ ಹಾಕಿದರೆ ಸಹಕಾರಿಯಾಗುತ್ತದೆ ಎಂದು ಹೇಳಬೇಕು.

೧೧–೩೦ ಎ.ಎಂ.

ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ವಿವರವಾಗಿ ಉತ್ತರ ಕೊಡಬೇಕು. ಕರ್ನಾಟಕದ ಎಸ್ಟಿ ಮೇಟ್ ಕಮಿಟಿಯವರು ದೇಶದಲ್ಲಿಯೇ ಪ್ರಥಮ ಭಾರಿಗೆ ಕೇಂದ್ರ ಸರ್ಕಾರದ ಪಾರ್ಲಿಮೆಂಟರಿ ಎಸ್ಟಿಮೇಟ್ಸ್ ಕಮಿಟಿ ಜೊತೆ ಪತ್ರವ್ಯವಹಾರ ನಡೆಸಿದರೂ ದುರ್ದೈವವಶಾತ್ ಅವರು ನಮಗೆ ಇದುವರೆವಿಗೂ ನಮ್ಮ ಪತ್ರಕ್ಕೆ ಉತ್ತರವೇ ಬರೆಯಲಿಲ್ಲ. ಎರಡು ಮೂರು ಸಾರಿ ಪತ್ರ ವ್ಯವಹಾರ ನಡೆಸಿದ್ದೇವೆ. ಈ ಬಗ್ಗೆ ಕೂಡ ಮಾನ್ಯ ಮುಖ್ಯಮಂತ್ರಿಗಳು ಗಮನಹರಿಸಿ ತಮ್ಮ ಪ್ರಭಾವವನ್ನು ಅವರ ಮೇಲೆ ಬೀರಿ ಯಾವ ರೀತಿಯಿಂದಲಾದರೂ ಅನುಕೂಲ ಮಾಡಿ ಕೊಡಬೇಕು ಮತ್ತು ನನ್ನ ಪ್ರಶ್ನೆಗೆ ವಿವರವಾದ ಉತ್ತರ ಕೊಡಬೇಕೆಂದು ಕೋರುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ರಾಷ್ಟ್ರೀಯ ಮಂಡಲಿಯಲ್ಲಿ ಸಹ ಈ ವಿಷಯವನ್ನು ನಾವು ಅಂದರೆ ಕಾಂಗ್ರೆಸ್ಸೇತರ ಮುಖ್ಯಮಂತ್ರಿಗಳು ಎತ್ತಿದ್ದೇವೆ ಮತ್ತು ಫೈನಾನ್ಸ್ ಕಮಿಷನ್ ಜೊತೆಗೆ ಚರ್ಚೆ ಮಾಡುವಾಗ ಸಹ ಈ ವಿಷಯವನ್ನು ಎತ್ತಿದ್ದೇವೆ. ಈಗೆ ಅವರಿಗೆ ಅಂತರರಾಷ್ಟ್ರೀಯ ಹಣ ಸಹಾಯ ಏನು ಬರುತ್ತದೆ ಅದರಲ್ಲಿ ಅವರು ಸಾಲದ ರೂಪವಾಗಿ ಶೇಕಡ ೭೦ ಪರ್ಸೆಂಟ್‌ನು ಕೊಡುತ್ತಾರೆ ಇನ್ನು ೩೦ ಪರ್ಸೆಂಟ್ ಗ್ರಾಂಟ್ ಅನ್ನು ರಾಜ್ಯ ಸರ್ಕಾರಗಳಿಗೆ ಕೊಡುತ್ತಾರೆ. ಈ ಸಾಲದ ಮೇಲೆ ಅವರು ಬಡ್ಡಿಯನ್ನು ಹೆಚ್ಚು ಅನುಕರಣೆ ಮಾಡಿದ್ದಾರೆ. ಈ ಬಗ್ಗೆ ಅವರಲ್ಲಿ ವಾದ ಸಹ ಮಾಡಿದ್ದೇವೆ. ಬಹುಶಃ ಈ ಬಗ್ಗೆ ಫೈನಾನ್ಸ್ ಕಮಿಷನ್‌ರವರು ಬೇರೆ ನಿಲುವನ್ನು ಈ ಸಾರಿ ತೆಗೆದುಕೊಳ್ಳಬಹುದೆಂದು ನಾನು ಆಸೆ ಮಾಡುತ್ತೇನೆ. ಮಾನ್ಯ ಸದಸ್ಯರ ಸೂಚನೆ ಏನಿದೆ, ಅದು ಸ್ವಾಗತಾರ್ಹವಾದುದು

ಸೇಂದಿ ಕಲಬೆರಕೆ ಮಾಡಿರುವ ಗುತ್ತಿಗೆದಾರರು

೧೩೮೪. ಶ್ರೀ ಗೋಪಾಲ ಮುಕುಂದ ಕಾನಡೆ (ಸಿಸಿ).—ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೬–೮೭, ೧೯೮೭–೮೮ರ ಸೇಂದಿ ಕಲಬೆರಕೆ ಮಾಡಿರುವ ಗುತ್ತಿಗೆದಾರರುಗಳ ಹೆಸರುಗಳೇನು ? ಹಾಗೂ ವಿಳಾಸ ಒದಗಿಸುವುದು;

ಆ) ಹಾಗಿದ್ದಲ್ಲಿ ಅಂತಹವರ ಮೇಲೆ ಸರ್ಕಾರವು ಗಮನ ಹರಿಸಿ ಕೈಗೊಂಡ ಕ್ರಮವೇನು ?

ಇ) ಸೇಂದಿ ಗುತ್ತಿಗೆದಾರರಿಂದ ವರ್ಷಕ್ಕೆ ಬರುವ ಆದಾಯವೆಷ್ಟು ?

ಶ್ರೀ ಡಿ.ಬಿ. ಇನಾಂದಾರ್ (ಅಬಕಾರಿ ಮಂತ್ರಿಗಳು).—

ಅ) ೧೯೮೬–೮೭ ಮತ್ತು ೧೯೮೭–೮೮ನೇ ಸಾಲಿನಲ್ಲಿ ಸೇಂದಿ ಕಲಬೆರಕೆಗೆ ಮೊಕದ್ದಮೆಗಳನ್ನು ಹೂಡಿರುವ ಪಟ್ಟಿಯನ್ನು ಲಗತ್ತಿಸಿದೆ.

ಆ) ಈ ಮೊಕದ್ದಮೆಗಳಲ್ಲಿ ಪ್ರಥಮ ಮಾಹಿತಿಯ ವರದಿಯನ್ನು ಸಲ್ಲಿಸಲಾಗಿದೆ ಮತ್ತು ಪ್ರಕರಣಗಳನ್ನು ತನಿಖೆ ಮಾಡಲಾಗುತ್ತಿದೆ ಕೆಲವೊಂದು ಪ್ರಕರಣಗಳಲ್ಲಿ ಆರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ.

ಇ) ೧೯೮೭–೮೮ರ ಸಾಲಿನ ಅಂದಾಜು ಮಾಡಲಾದ ಆದಾಯ ೫೭ ಕೋಟಿ ರೂಪಾಯಿಗಳು.

ಶ್ರೀ ಗೋಪಾಲ ಮಂಕುಂದ ಕಾನಡೆ.— ಮಾನ್ಯ ಅಧ್ಯಕ್ಷರೇ, ಕಲಬೆರಕೆ ಹೆಂಡವನ್ನು ೧೯೮೬-೮೭ ಮತ್ತು ೧೯೮೭-೮೮ನೇ ಸಾಲಿನಲ್ಲಿ ಯಾರ್ಯಾರು ತಯಾರಿಸಿದ್ದಾರೆ, ಅವರ ಹೆಸರುಗಳನ್ನು ಓದಿ ಹೇಳ ಬೇಕು.

ಶ್ರೀ ಡಿ.ಬಿ. ಇನಾಂದಾರ್ —ಮಾನ್ಯ ಅಧ್ಯಕ್ಷರೇ, ನನ್ನ ಉತ್ತರದಲ್ಲಿ ಪಟ್ಟಿಯನ್ನು ಕೊಟ್ಟಿದೆ ನೆ ಅದರಲ್ಲಿ ಎಲ್ಲರ ಹೆಸರುಗಳು ಇವೆ.

ಶ್ರೀ ಗೋಪಾಲ ಮಂಕುಂದ ಕಾನಡೆ.—ಸ್ವಾಮಿ, ಅವರು ಇಂಗ್ಲೀಷ್‌ನಲ್ಲಿ ಉತ್ತರ ಕೊಟ್ಟಿದ್ದಾರೆ ನನಗೆ ಇಂಗ್ಲೀಷ್ ಬರುವುದಿಲ್ಲ ಕನ್ನಡದಲ್ಲಿ ಹೆಸರು ಓದಿ ಹೇಳಲಿ

ಶ್ರೀ ಡಿ. ಬಿ. ಇನಾಂದೆರ್ —:ಹೆಸರುಗಳು ಈ ರೀತಿ ಇದೆ.

Sl. No.	Name	Address
	1986-87	
1	Sri P. Guruswamy. Chitradurga District	Average post Davanagere Taluk, Chitradurga District
2	Sri. H.F. Vijaya Kumar, Gulbarga District.	B.M. Road, Hassan.
	1987-88	
1	Sri. M. Shankar. Gulbarga District	Ravindra Nagar, Hassan
2	Sri. Suresh Kumar Toddy Contractor Kolar District.	V.V. Nagar, H.M.T.Layout, Gangenahalli, Bangalore-32.
3	Sri. Rajarajeshwari and Co., Mysore Taluk	Garden House, Channarya-patna. Hassan District.
4	Sri. T.P. Kempaiah, Kunigal Taluk	T. Begur, Nelamangala Taluk, Bangalore District.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ಮಾನ್ಯ ಅಧ್ಯಕ್ಷರೇ ಈ ೫ ಜನರ ಹೆಸರುಗಳನ್ನು ಬಿಟ್ಟರೆ ಬಾಕಿ ಎಲ್ಲರೂ ಅಪ್ಪಟ ಹೆಂಡವನ್ನು ಕೊಟ್ಟಿದ್ದಾರೆಂದು ಅರ್ಥವೇ ? ಮತ್ತು ಈ ರೀತಿ ಅಡಲ್ಟೆರೇಷನ್ ಮಾಡಿದಂತಹವರಿಗೆ ಏನು ಶಿಕ್ಷೆ ಕೊಡುತ್ತೀರಿ ? ಕಾನೂನು ಪ್ರಕಾರ ಮಾಗಿಜಮಮಂ ಶಿಕ್ಷೆ ಏನು ? ಮಿನಿಮಮ್ ಶಿಕ್ಷೆ ಏನು ?

ಶ್ರೀ ಡಿ.ಬಿ. ಇನಾಂದಾರ್.—ಕೆಲವರ ಮೇಲೆ ಕೇಸ್‌ಗಳನ್ನು ಈಗಾಗಲೇ ಕೋರ್ಟ್‌ಗೆ ಹಾಕಿದ್ದೇವೆ. ೧೯೮೬-೮೭ನೇ ಸಾಲಿನಲ್ಲಿ ಶ್ರೀ ಪಿ. ಗುರುಸ್ವಾಮಿ ಚಿತ್ರದುರ್ಗ ಜಿಲ್ಲೆ ಇವರ ಮೇಲೆ ಸುಮಾರು ೭ ಕೇಸ್‌ಗಳನ್ನು ಬುಕ್ ಮಾಡಿ ಎರಡು ಕೇಸ್‌ಗಳನ್ನು ಕೋರ್ಟಿಗೆ ಕಳುಹಿಸಿದ್ದೇವೆ, ಇನ್ನುಳಿದವುಗಳ ಬಗ್ಗೆ ಇನ್‌ವೆಸ್ಟಿಗೇಷನ್ ನಡೆಯುತ್ತಿದೆ.
೧೯೮೭-೮೮ರಲ್ಲಿ ಮೈಸೂರಿನಲ್ಲಿ ಹೆಂಡದ ಕಲಬೆರಕೆ ಬಗ್ಗೆ ೬ ಕೇಸ್ ಬುಕ್ ಆಗಿದೆ. ಅದರಲ್ಲಿ ೫ ಕೇಸ್ ಮೇಲೆ ಚಾರ್ಜ್ ಷೀಟ್ ಹಾಕಲಾಗಿದೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ಇವರು ಎಷ್ಟೆಷ್ಟು ಸಾವಿರ ಲೀಟರ್ ಹೆಂಡವನ್ನು ಕಲಬೆರಕೆ ಮಾಡಿ ಮಾರಾಟ ಮಾಡಿದ್ದಾರೆ? ಹೆಂಡವನ್ನು ಕಲಬೆರಕೆ ಮಾಡುವಾಗ ಎಷ್ಟು ಜನ ಸಿಕ್ಕಿದ್ದಾರೆ. ಕಲಬೆರಕೆ ಹೆಂಡ ಕುಡಿದು ಎಷ್ಟು ಜನ ಸತ್ತಿದ್ದಾರೆ ? ಆಮೇಲೆ, ಕಲಬೆರಕೆ ಮಾಡಿ ಸಿಕ್ಕಿಹಾಕಿಕೊಂಡಿರುವ ಕಂಟ್ರಾಕ್ಟ್‌ದಾರರುಗಳಿಗೇ ತಿರುಗಿ ಎಷ್ಟು ಜನಕ್ಕೆ ಲೈಸನ್ಸ್ ಕೊಟ್ಟಿದ್ದೀರಿ ?

ಶ್ರೀ ಡಿ. ಬಿ. ಇನಾಂದಾರ್.— ಎಷ್ಟೆಷ್ಟು ಜನ ಸತ್ತಿದ್ದಾರೆ ಎಂದರೆ, ಯಾರೂ ಕಲಬೆರಕೆ ಹೆಂಡ ಕುಡಿದು ಸತ್ತಿಲ್ಲ. ಸೇಂದಿ ಸಪ್ಲೈ ಮಾಡುವವರಿಂದ ಸೇಂದಿಯ ಸ್ಯಾಂಪಲ್‌ನ್ನು ತೆಗೆದುಕೊಂಡು ಅದನ್ನು ಟೆಸ್ಟ್ ಮಾಡಲಾಗುತ್ತದೆ. ಕಲಬೆರಕೆ ಮಾಡಲಾಗಿದೆ ಎಂದು ಗೊತ್ತಾದರೆ ಅಂಥವರ ಮೇಲೆ ಕೇಸ್ ಬುಕ್ ಮಾಡಲಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅವರು ಕೇಳಿದ ಪ್ರಶ್ನೆಗೆ ಸರಿಯಾದ ಉತ್ತರ ಬಂದಿಲ್ಲ. ೧೯೬೬-೬೭ ಮತ್ತು ೧೯೬೭-೬೮ರಲ್ಲಿ ೬ ಜನರಲ್ಲಿ ಹೆಂಡದಲ್ಲಿ ಕಲಬೆರಕೆ ಮಾಡಿದ್ದಕ್ಕಾಗಿ ಕೇಸ್ ಬುಕ್ ಮಾಡಲಾಗಿದೆ ಎಂದು ಹೇಳಿದ್ದೀರಿ, ಇವರುಗಳಲ್ಲಿ ಎಷ್ಟು ಜನಕ್ಕೆ ನೀವು ಶಿಕ್ಷೆ ಕೊಟ್ಟಿದ್ದೀರಿ? ಹೆಂಡದಲ್ಲಿ ಕಲಬೆರಕೆ ಮಾಡಿರುವವರಿಗೆ ಪುನಃ ಲೈಸನ್ಸ್‌ನ್ನು ಕೊಡಲಾಗಿದೆಯೇ ? ಒಂದು ಸಾರಿ ಆಡಲ್ಟ್ರೇಷನ್ ಮಾಡುತ್ತಾರೆಂದು ಬ್ಲಾಕ್ ಲಿಸ್ಟ್‌ನಲ್ಲಿ ಸೇರಿಸಿದ ಮೇಲೆ ಪುನಃ ಅಂಥವರಿಗೆ ಕಂಟ್ರಾಕ್ಟ್ ಕೊಡುವುದು ಸರಿಯೇ ?

ಶ್ರೀ ಡಿ. ಬಿ. ಇನಾಂದರ್.—ತಪ್ಪಿತಸ್ಥರ ಮೇಲೆ ಚಾರ್ಜ್‌ಶೀಟ್ ಫೈಲ್ ಮಾಡಿದ್ದೇವೆ. ಕೋರ್ಟ್‌ನವರು ಅದರ ಬಗ್ಗೆ ಇನ್ನೂ ತೀರ್ಮಾನ ಮಾಡಿಲ್ಲ. ಕೋರ್ಟ್‌ನಲ್ಲಿ ತೀರ್ಮಾನ ಆದ ಮೇಲೆ ಅವರುಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಅಧ್ಯಕ್ಷರೇ,

ಅಧ್ಯಕ್ಷರು.—ಒಂದು ಪ್ರಶ್ನೆಗೆ ಎಷ್ಟು ಸಾರಿ ಕೇಳುವುದು?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಈ ಪ್ರಶ್ನೆ ಅಂಥಾದ್ದು. ಪ್ರಶ್ನೆಯನ್ನು ಕೇಳಬೇಕಾಗುತ್ತದೆ.

ಅಧ್ಯಕ್ಷರು.—ನೀವೂ ಅಧ್ಯಕ್ಷರಾಗಿದ್ದವರು. ನಿಮಗೂ ಗೊತ್ತು. ಎಷ್ಟು ಸಾರಿ ಅವಕಾಶ ಕೊಡಬೇಕೆಂದು. ನಾನು ಎಂ. ಎಲ್. ಎ. ಆಗಿದ್ದಾಗ ನೀವು ಎರಡು ಮೂರು ಸಾರಿ ಮಾತ್ರ ಅವಕಾಶ ಕೊಡುತ್ತಿದ್ದೀರಿ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಪದೇ ಪದೇ ಪ್ರಶ್ನೆಗಳನ್ನು ಕೇಳುವ ಅಭ್ಯಾಸ ನನಗಿಲ್ಲ.

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು, ಆ ೫ ಜನರನ್ನು ಬಿಟ್ಟರೆ ಉಳಿದವರು ಅಷ್ಟಟ ಹೆಂಡವನ್ನು ಕೊಟ್ಟಿದ್ದಾರೆಯೇ ಎಂದು ಕೇಳಿದ್ದಾರೆ. ಈ ಸದನದಲ್ಲಿ ಯಾವ ವಿಷಯವನ್ನೂ ಇದರ ಬಗ್ಗೆ ಮಾಚ್ಚಿಡಬೇಕಾದುದು ಏನೂ ಇಲ್ಲ. ಕಲಬೆರಕೆ ಹೆಂಡದಿಂದ ಜನರ ಆರೋಗ್ಯಕ್ಕೆ ಮತ್ತು ಬಡವರ ಜೀವನದಲ್ಲಿ ಆಗತಕ್ಕಂಥ ದುರಂತವನ್ನು ಸರ್ಕಾರ ಗಮನಿಸಿದೆ, ಈ ಸಮಾಜ ಗಮನಿಸಿದೆ. ಇನ್ನು ಮುಂದೆ ಹಂತ ಹಂತವಾಗಿ ಹೆಂಡದ ಮಾರಾಟವನ್ನು ನಿಲ್ಲಿಸಬೇಕೆಂದು ಸರ್ಕಾರ ಈಗಾಗಲೇ ತೀರ್ಮಾನ ಮಾಡಿದೆ. ಸಧ್ಯಕ್ಕೆ ಮೂರ್ನಾಲ್ಕು ಜಿಲ್ಲೆಗಳಲ್ಲಿ ಹೆಂಡದ ಮಾರಾಟವನ್ನು ಕಂಪ್ಲೀಟ್ ಆಗಿ ನಿಲ್ಲಿಸಬೇಕೆಂದು ತೀರ್ಮಾನ ಮಾಡಿದ್ದೇವೆ. ಕಲಬೆರಕೆ ಬಗ್ಗೆ ಹೇಳಬೇಕಾದರೆ, ಸುಮಾರು ೬೦ ವರ್ಷಗಳಿಂದಲೂ ಹೆಂಡಕ್ಕೆ ಕ್ಲೋರಲ್ ಹೈಡ್ರೇಟ್‌ನ್ನು ಸೇರಿಸುತ್ತಲೇ ಬಂದಿದ್ದಾರೆ. ಹಿಂದೆ ಆ ಜನರ ಆರೋಗ್ಯವನ್ನು ಕೆಡಿಸದಷ್ಟು ಸಣ್ಣ ಪ್ರಮಾಣದಲ್ಲಿ ಬೆರಸಲಾಗುತ್ತಿತ್ತು. ಈಗ ಮರದಿಂದ ಬರತಕ್ಕ ಹೆಂಡ ಕಡಿಮೆಯಾಗಿರುವುದರಿಂದ ಮತ್ತು ಹೆಂಡದ ಡಿಮ್ಯಾಂಡ್ ಜಾಸ್ತಿಯಾಗಿರುವುದರಿಂದ ಬರೀ ನೀರಿಗೆ ಕ್ಲೋರಲ್ ಹೈಡ್ರೇಟ್‌ನ್ನು ಹಾಕುವ ವಿಷಯ ನಮಗೆ ಗೊತ್ತಾಗಿದೆ. ಕ್ಲೋರಲ್ ಹೈಡ್ರೇಟ್‌ನ್ನು ಪೂರ್ತಿಯಾಗಿ ಹಾಕಿ ಹೆಂಡವೆಂದು ಮಾರಾಟ ಮಾಡುವವರ ಮೇಲೆ ಕೇಸ್ ಬುಕ್ ಮಾಡಲಾಗುತ್ತಿದೆ. ಆದರೆ, ಒಂದು ವಿಷಯ, ಈಗ ಪ್ಯೂರ್ ಟಾಡಿ ಎಲ್ಲೂ ಮಾರಾಟ ವಾಗುತ್ತಿಲ್ಲ.

ಅಧ್ಯಕ್ಷರು.—(ಶ್ರೀ ಕೆ. ಎಚ್. ಪಾಟೀಲ್.—ಗೈರು ಹಾಜರಿ) ಮಾನ್ಯ ಯಡಿಯೂರಪ್ಪನವರು, ತಮ್ಮ ಪ್ರಶ್ನೆ ಕೇಳುವುದು.

ಚುಕ್ಕೆ ಪ್ರಶ್ನೆ ಸಂಖ್ಯೆ. ೩೭೨ (೧೩೭೯)

ರಾಜ್ಯದ ಹಣಕಾಸಿನ ತೊಂದರೆ

೧೩೭೯. ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಹಾಗೂ ಸರ್ಕಾರಿ ನೌಕರರ ಸಂಬಳ ಕೊಡುವುದಕ್ಕೆ ಹಣಕಾಸಿನ ತೊಂದರೆ ಇರುವುದು ನಿಜವೇ ?

ಆ) ಹಾಗಿದ್ದಲ್ಲಿ ಬೆಂಗಳೂರು ಆಪೆಕ್ಸ್ ಬ್ಯಾಂಕಿನಿಂದ, ದಕ್ಷಿಣ ಕನ್ನಡ ಎಪಿಎಂಸಿ ಹಾಗೂ ಮುಜರಾಯಿ ದೇವಸ್ಥಾನಗಳಿಂದ ನಗರ ಕಾರ್ಪೋರೇಷನ್‌ಗಳಿಂದ ಸರ್ಕಾರದವರು ೫೦/೬೦ ಕೋಟಿ ರೂಪಾಯಿಗಳ ಹಣ ಪಡೆದಿರುವುದು ನಿಜವೆ ?

ಇ) ೧೯೮೭-೮೮ನೇ ಸಾಲಿನಲ್ಲಿ ಈವರೆಗೆ ಸರ್ಕಾರವು ಮೇಲ್ಕಂಡ ಸಂಸ್ಥೆಗಳಿಂದ ಎಷ್ಟು ಹಣ ಪಡೆದಿದೆ ? (ವಿವರ ಒದಗಿಸುವುದು).

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿ).—

ಅ) ರಾಜ್ಯವು ಸಂಪನ್ಮೂಲ ಕೊರತೆಯನ್ನು ಎದುರಿಸುತ್ತಿರುವುದು ನಿಜ. ಆದರೆ ರಾಜ್ಯದ ಸರ್ಕಾರಿ ನೌಕರರಿಗೆ ಸಂಬಳ ಕೊಡುವುದಕ್ಕಾಗಲಿ, ಅಥವಾ ರಾಜ್ಯದ ಅಭಿವೃದ್ಧಿ ಕಾರ್ಯಗಳಿಗೆ ಹಣ ಬಿಡುಗಡೆ ಮಾಡುವುದಕ್ಕಾಗಲೀ ಯಾವುದೇ ತೊಂದರೆ ಉಂಟಾಗಿಲ್ಲ.

ಆ) ಖಜಾನೆಗಳಲ್ಲಿ ವೈಯಕ್ತಿಕ ಠೇವಣಿ ಖಾತೆಗಳನ್ನು ತೆರೆಯಲು ಅವಕಾಶವಿರುತ್ತದೆ. ಜಮೆ ಹಾಗೂ ಹಿಂದಂರುಗಿ ಪಡೆಯುವುದು ನಿರಂತರವಾಗಿ ನಡೆದಿರುತ್ತದೆ. ಠೇವಣಿದಾರರು ತಮ್ಮ ಕಾರ್ಯಕ್ರಮಗಳ ಅಗತ್ಯಗಳನುಸಾರ ಹಣವನ್ನು ಜಮೆ ಮಾಡಿ ಪಾಪಸ್ಸು ಪಡೆಯುತ್ತಾರೆ. ಸರ್ಕಾರಿ ನೌಕರರ ಸಂಬಳ ಕೊಡುವುದಕ್ಕಾಗಲಿ ಅಥವಾ ಅಭಿವೃದ್ಧಿ ಕಾರ್ಯಗಳಿಗಾಗಲಿ, ಯಾವ ಸಂಸ್ಥೆಯಿಂದಲೂ ಸರಕಾರ ಹಣ ಪಡೆದಿರುವುದಿಲ್ಲ. ಆದರೆ ಸರಕಾರದ ಅಲ್ಪಾವಧಿ ಹಾಗೂ ಅಗ್ರಿವಧಿನ ಪರಿಸ್ಥಿತಿಯನ್ನು ಸುಧಾರಿಸಲು ದಕ್ಷಿಣ ಕನ್ನಡ ಎ.ಪಿ.ಎಂ.ಸಿ. ಯಿಂದ ೧೯೮೭-೮೮ನೇ ಸಾಲಿನಲ್ಲಿ ರೂ. ೩.೫೬ ಕೋಟಿಯನ್ನು ಠೇವಣಿಯಾಗಿ ಪಡೆಯಲಾಗಿತ್ತು.

ಇ) ಉದ್ಭವಿಸುವುದಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೆ, ನನ್ನಲ್ಲಿ ಅಧಿಕೃತವಾದ ಮಾಹಿತಿ ಉಂಟು ಸರಕಾರದವರು ಆಪೆಕ್ಸ್ ಬ್ಯಾಂಕ್‌ನಿಂದ, ಕೆಲವು ಎ. ಪಿ, ಎಂ. ಸಿ. ಗಳಿಂದ, ಬಿ. ಡಿ, ಎ. ನಿಂದ ಯಾವುದೇ ಅಭಿವೃದ್ಧಿ ಕಾರ್ಯಗಳಿಗಾಗಿ ಹಣಕಾಸಿನ ತೊಂದರೆಯಾಗಿದೆ ಅಂತಲೋ, ಅಥವಾ ಸರಕಾರಿ ನೌಕರರಿಗೆ ಸಂಬಳ ಸಾರಿಗೆಗಳನ್ನು ಕೊಡುವುದಕ್ಕೆ ಎಂತಲೋ, ಅವುಗಳಿಂದ ಹಣವನ್ನು ಪಡೆದಿದ್ದಾರೆ. ಉದಾಹರಣೆಗೆ ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ ಎ. ಪಿ. ಎಂ. ಸಿ. ಯಿಂದ ೩ ಕೋಟಿ, ೬೬ ಲಕ್ಷ ರೂಪಾಯಿಗಳನ್ನು ತೆಗೆದು ಕೊಂಡಿದ್ದಾರೆ. ಅವರು ಡಿಪಾಸಿಟ್ ಇಟ್ಟಿದ್ದ ಹಣವನ್ನು ನಿಮಗೆ ಕೊಟ್ಟಿದ್ದಾರೆ. ಅಂತಹ ಸಂದರ್ಭಗಳಲ್ಲಿ ಅವರಿಗೆ ಹೆಚ್ಚಿನ ಬಡ್ಡಿ ವ್ಯತ್ಯಾಸವನ್ನು ಸರಕಾರದವರು ತುಂಬಿ ಕೊಡುತ್ತಾರೆಯೇ ? ನಾನು ಸ್ಪಷ್ಟವಾಗಿ ಕೇಳಿದ್ದೇನೆ. ೧೯೮೭-೮೮ನೇ ಸಾಲಿನಲ್ಲಿ ಯಾವುದೇ ಪರಿಸ್ಥಿತಿ ಹಾಗಿ ಇರಬಹುದು, ಆಪೆಕ್ಸ್ ಬ್ಯಾಂಕ್‌ನಿಂದ ೧೦ ಕೋಟಿ ರೂಪಾಯಿಗಳನ್ನು ತರಿಸಿದ್ದೀರಿ. ಅದು ಅಭಿವೃದ್ಧಿ ಕಾರ್ಯಗಳಿಗಾಗಿ ತರಿಸಿರಬಹುದು. ಈ ರೀತಿಯಾಗಿ ಒಟ್ಟು ಎಲ್ಲಾ ಸಂಸ್ಥೆಗಳಿಂದ ತರಿಸಿದ ಹಣ ಎಷ್ಟು ? ಹೀಗೆ ಪಡೆದ ಹಣಕ್ಕೆ ವ್ಯತ್ಯಾಸದ ಬಡ್ಡಿಯನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡಿದ್ದೀರಾ?

ಶ್ರೀ ರಾಮಕೃಷ್ಣ ಹೆಗಡೆ.—ಅಧ್ಯಕ್ಷರೆ, ನಾನು ಈಗಾಗಲೇ ಹೇಳಿದಂತೆ ನಾವು ಸಂಬಳ ಕೊಡುವುದಕ್ಕಾಗಿ ಅಥವಾ ದೈನಂದಿನ ಖರ್ಚಿಗಾಗಿ ಈ ಹಣವನ್ನು ನಾವು ಪಡೆದಿಲ್ಲ. ಕೇಂದ್ರ ಸರಕಾರದ ಹೊಸ